ದಿ: 05.06.2026

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 230/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಮಂಜುನಾಥ್. ಕೆ | ಪ್ರಾ.ಸಾ.5 |
| ತಂದೆಯ/ಗಂಡನ ಹೆಸರು | : | ಕೃಷ್ಣಪ್ಪ | ಚಾ.ಸಾ.7 |
| ವಯಸ್ಸು | : | 43 ವರ್ಷ | |
| ಕೆಲಸ | : | ವೈದ್ಯಾಧಿಕಾರಿ, ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆ | ಸಾ ಪ್ರ ಬೋ |
| ವಾಸ | : | ಹೊಳಲ್ಕೆರೆ | ದಿ:05.06.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಕಳೆದ 10 ವರ್ಷಗಳಿಂದ ಹೊಳಲ್ಕೆರೆಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಮೂಳೆ ತಜ್ಞರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 17.11.2022 ರಂದು ಸಂಜೆ 6.45 ಗಂಟೆಯ ಸಮಯದಲ್ಲಿ ನಾನು ತುರ್ತು ಚಿಕತ್ಸಾ ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಚಾಸಾ.1 ರವರು ಹಲ್ಲೆಯ ಹಿನ್ನಲೆಯಲ್ಲಿ ನನ್ನ ಸಮಕ್ಷಮ ಹಾಜರಾಗಿದ್ದು, ಅವರನ್ನು ಪರೀಕ್ಷಿಸಲಾಗಿ ತಲೆಯಲ್ಲಿ ನೋವಿನ ಅನುಭವ ಇತ್ತು, ಸೊಂಟದ ಹಿಂಬಾಗದಲ್ಲಿ ನೋವಿನ ಅನುಭವ ಇತ್ತು, ಎಡ ಕಿವಿಯಲ್ಲಿ ನೋವಿನ ಅನುಭವ ಇತ್ತು, ಹೊಟ್ಟೆಯಲ್ಲಿ ನೋವಿನ ಅನುಭವ ಇತ್ತು. ಸೊಂಟದ ಕ್ಷ ಕಿರಣ ತೆಗೆದು ಪರೀಕ್ಷಿಸಲಾಗಿ, ಯಾವುದೇ ಮೂಳೆ ಮುರಿತ ಉಂಟಾಗಿರುವುದಿಲ್ಲ. ಈ ಮೇಲ್ಕಂಡ ಎಲ್ಲಾ ಗಾಯ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತವೆ. ನ್ಯಾಯಾಲಯದ ಮುಂದಿರುವ ಮು.ಮಾ.1 ಮತ್ತು 2 ರ ಕೋಲುಗಳಿಂದ ಹಲ್ಲೆ ಮಾಡಿದ್ದಲ್ಲಿ ಮೇಲ್ಕಂಡ ಗಾಯಗಳು ಏರ್ಪಡುವ ಸಾಧ್ಯತೆ ಇದೆ. ಸಾಕ್ಷಿ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿಪಿ.6 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಕೆ.ವಿ.ಎನ್. ವಕೀಲರಿಂದ**

3. ಚಾಸಾ.1 ರವರು ಸಂಜೆ 6-45 ಕ್ಕೆ ಚಿಕಿತ್ಸೆಗಾಗಿ ಬಂದಿದ್ದರು. ಮು.ಮಾ.1 ಮತ್ತು 2 ರ ಕೋಲುಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸುಳ್ಳು ಗಾಯದ ಪ್ರಮಾಣ ಪತ್ರವನ್ನು

ದಿ: 05.06.2026

ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ